

# ಮೋಹಕ ಮೂಗುತಿ



ಮುಖದ ಅಂದ
ಹೆಚ್ಚಿಸಲು ಮೂಗುತಿ ಸಹಕಾರಿ.
ಇದರಲ್ಲಿ ಹಲವು ವಿನ್ಯಾಸಗಳಿದ್ದು, ಫ್ಯಾಷನ್ ಪ್ರಿಯರನ್ನು
ಸೆಳೆಯುತ್ತಿವೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

**ಮೊಗದಲ್ಲಿ ಮೂಗುತಿ ಚೆಂದ**
**ಕಾಣುವೆ ನೀ ಆಗ ಬಲು ಅಂದ**
**ಸಾಟಿ ಇಲ್ಲ ಯಾರು ನಿನ್ನ ಮುಂದ**
**ನಿನ್ನ ನೋಡಲು ಆ ಚಂದಿರನೇ ಬಂದ**

ಆಭರಣಗಳಲ್ಲಿ ಮುಖದ ಅಂದ ಹೆಚ್ಚಿಸುವ ಮುಖ್ಯ ಆಭರಣ ಮೂಗುತಿ. ಮೂಗಿನ ಮೇಲೆ ಧರಿಸಬಹುದಾದ ಒಂದು ಆಭರಣವೇ ಮೂಗುತಿ. ಓಲೆ ಜುಮುಕಿ ಕಿವಿಗೆ ಹೇಗೆ ಚಂದವೋ ಆಕರ್ಷಕ ಮೂಗುತಿ ಮುಖದ ಅಂದಕ್ಕೆ ಪೂರಕ. ಆಭರಣ ಸೌಂದರ್ಯವರ್ಧಕದ ಜೊತೆಗೆ ಆರೋಗ್ಯವರ್ಧಕವೂ ಹೌದು.

ನಾನು ರಾಣಿಯಂತೆ ಕಾಣಬೇಕು ಎನ್ನುವುದು ಎಲ್ಲ ಹೆಣ್ಣು ಮಕ್ಕಳ ಆಸೆ. ಹಾಗೆ ಕಾಣೋದಕ್ಕೆ ಸುಲಭ ಉಪಾಯ ವಿಧ ವಿಧದ ಮೂಗುತಿ ಧರಿಸಿ ಸುಂದರವಾದ ಹೇರ್‌ಸ್ಟೈಲ್ ಮಾಡೋದು. ಮೂಗುತಿ ಇಲ್ಲದೆ ಎಷ್ಟೇ ಆಭರಣ, ಜರಿತಾರೆ ಬಟ್ಟೆ ತೊಟ್ಟರೂ ರಾಣಿಯ ಲುಕ್ ಬರೋದಿಲ್ಲ. ರಾಣಿಯಂತೆ ಕಾಣಲು ತುಂಬಿದ ಸಭೆಯಲ್ಲಿ ಎದ್ದು ಕಾಣಲು ಯಾವ ತರಹದ ಮೂಗುತಿ ಧರಿಸಬೇಕು? ಇದು ನಾವು ತೊಟ್ಟ ಇತರ ಆಭರಣ ಹಾಗೂ ಉಡುಗೆಯೊಂದಿಗೆ ಹಾಲು ಸಕ್ಕರೆಯಂತೆ ಬೆರೆಯಬೇಕು.

ಮೂಗುತಿಯಲ್ಲಿ ಹಲವು ವಿಧ

- ಬೊಟ್ಟು ಮೂಗುತಿ
- ಪ್ರೆಸ್ಸಿಂಗ್ ಮೂಗುತಿ
- ಉತ್ತರ ಕರ್ನಾಟಕ ಶೈಲಿ
- ಬಳೆಯಾಕಾರದ ಮೂಗುತಿ
- 2 ಎಳೆ 3 ಎಳೆ ಮೂಗುತಿ
- ಜಾಲರಿ ಹೊಂದಿದ ಮೂಗುತಿ

## ಬೊಟ್ಟು ಮೂಗುತಿ

ಮೂಗುತಿ ಪ್ರಾಚೀನ ಕಾಲದಿಂದಲೂ ಭಾರತೀಯರು ಧರಿಸುತ್ತಿದ್ದ ಆಭರಣ. ಈ ಆಭರಣಗಳನ್ನು ಮೂಗಿನ ಹೊಳ್ಳೆಯ ಪಾರ್ಶ್ವದಲ್ಲಿ ಒಂದು ರಂಧ್ರದ ಮೂಲಕ ಧರಿಸುತ್ತಿದ್ದರು. ಇದು ಮೂಗು ಬೊಟ್ಟು ಎಂದೇ ಪ್ರಸಿದ್ಧ. ಚಿಕ್ಕದಾದ ಚಿನ್ನದ ಗುಂಡು, ಬಿಳಿ ಹರಳನ್ನು ಹೊಂದಿದ ಕ್ಲೋಸ್ ಸೆಟ್ಟಿಂಗ್ ಮೂಗುತಿ ಬಹಳ ಪ್ರಸಿದ್ಧಿಯಲ್ಲಿತ್ತು. ಜೊತೆಗೆ ಕೆಂಪು ಹರಳು ಇದ್ದು, ಸ್ವಲ್ಪ ಉದ್ದದ ವಿನ್ಯಾಸದ ಮೂಗುತಿ ಬಳಕೆಯಲ್ಲಿತ್ತು.

ರಾಜ ಮನೆತನದವರು ಮುತ್ತು, ಹವಳ, ಕುಂದನ ವರ್ಕ್, ನೀಲ, ಪಚ್ಚೆ ಇಂತಹ ವಿಶೇಷ ನವರತ್ನಗಳನ್ನು ಪೋಣಿಸಿದ ನತ್ತುಗಳನ್ನು ಧರಿಸುತ್ತಿದ್ದರು. ಆದರೂ ಬೆಳ್ಳಿಯ ಕಾಸ್ಟಿಂಗ್ ವರ್ಕ್ ಇರುವ ಮೂಗುತಿಗಳೂ ಬಳಕೆಯಲ್ಲಿದ್ದವು. ಭಾರತದಾದ್ಯಂತ ಮೂಗುತಿಯನ್ನು ಹೆಂಗಳೆಯರು ಧರಿಸುತ್ತಿದ್ದರು.

ಕಾಲ ಕ್ರಮೇಣ ಮೂಗುತಿ ಚುಚ್ಚಬೇಕಲ್ಲ ಎಂದು ಕೆಲವು ಜನರು ಚಿಂತಿಸಿದ ಪರಿಣಾಮ ಪ್ರೆಸ್ಸಿಂಗ್ ಮೂಗುತಿ ಬಳಕೆಗೆ ಬಂತು.